**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ :07.12.2024**

**ಮುಂದುವರೆದ ಪಾಟೀ ಸವಾಲು - 1 ಮತ್ತು 4 ನೇ ಪ್ರತಿವಾದಿಗಳ ಪರ ವಕೀಲರಿಂದ :**

ನಿಪಿ-58 ರಲ್ಲಿ ಏನು ಬರೆದಿದೆ ಎಂದು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಪಿಳ್ಳಪ್ಪ ನನಗೆ ದೊಡ್ಡಪ್ಪ ಆಗಬೇಕು. 3 ನೇ ಪ್ರತಿವಾದಿ ಸದರಿ ಪಿಳ್ಳಪ್ಪರವರ ಮಗ ಎಂದರೆ ಸರಿ. ಪಿಳ್ಳಪ್ಪರವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು, ಅವರು ಗಂಗರತ್ನಮ್ಮ ಮತ್ತು ಗಾಯಿತ್ರಿ ಆಗಿರುತ್ತಾರೆ. ಪಿಳ್ಳಪ್ಪ ಮತ್ತು ಅವರ ಮಕ್ಕಳು 4 ನೇ ಪ್ರತಿವಾದಿಗೆ 20 ಗುಂಟೇ ಜಮೀನನ್ನು ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. 2 ಎಕರೆ ಜಮೀನಿನಲ್ಲಿ 20 ಗುಂಟೇ ಜಮೀನು ಪಿಳ್ಳಪ್ಪರವರ ಬಳಿ ಇತ್ತು. ಅದೇ ರೀತಿ ನಮ್ಮ ತಂದೆಗೆ 20 ಗುಂಟೇ ಹಾಗೂ 1 ಮತ್ತು 2 ನೇ ಪ್ರತಿವಾದಿಗಳಿಗೆ ತಲಾ 20 ಗುಂಟೇ ಇರುತ್ತದೆ. ಪಿಳ್ಳಪ್ಪರವರ 20 ಗುಂಟೇಗೂ ಮತ್ತು ನಮ್ಮ ತಂದೆಯ 20 ಗುಂಟೇಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ನಿಪಿ-58 ಕ್ಕೂ ಮತ್ತು ವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಸದರಿ ಜಮೀನಿನಲ್ಲಿ ಉತ್ತರದಿಂದ ದಕ್ಷಿಣಾಭಿಮುಖವಾಗಿ ಮೊದಲು ಪಿಳ್ಳಪ್ಪರವರ ಜಮೀನು ನಂತರ 1 ನೇ ಪ್ರತಿವಾದಿ ಜಮೀನು, ನಂತರ ವಾದಿಯ ಜಮೀನು ಹಾಗೂ ಆ ನಂತರ 2 ನೇ ಪ್ರತಿವಾದಿಯ ಜಮೀನು ಇರುತ್ತದೆ ಎಂದರೆ ಸರಿ. ಅದೇ ರೀತಿ ವ್ಯವಸಾಯ ಮಾಡಿಕೊಂಡು ಬೆಳೆ ಬೆಳೆಯುತ್ತಿದ್ದಾರೆಂದರೆ ಸರಿ. ಅದೇ ರೀತಿ ತಲಾ 20 ಗುಂಟೇ ಯಂತೆ ದಾವ ಐಟಂ ಸಂಖ್ಯೆ 1 ರಲ್ಲಿ 4 ಜನರ ಹೆಸರುಗಳು ಪಹಣಿ ಪತ್ರಿಕೆಯಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿ. ನಿಪಿ-58 ರಲ್ಲಿ ಇರುವ ಸ್ವತ್ತು ವಾದಿಗೆ ಯಾವುದೇ ಸಂಬಂಧ ಇರುವುದಿಲ್ಲ ಹಾಗೂ ಸದರಿ ಕ್ರಯ ಪತ್ರ ನಮಗೆ ಬಾಧ್ಯಸ್ಥ ಅಲ್ಲ ಎಂದು ಸಲ್ಲಿಸಿರುವ ಪ್ರಾರ್ಥನೆ ನಮಗೆ ಬೇಕಾಗಿಲ್ಲ. ವಾದಿ ಮತ್ತು ಅವರ ಸಹೋದರರ ಮಧ್ಯೆ ಆದ ವಿಭಾಗದ ಪ್ರಕಾರ ಪಹಣಿ ಪತ್ರಿಕೆಯಲ್ಲಿ ತಲಾ 20 ಗುಂಟೇ ಎಂದು ನಮೂದು ಮಾಡಲಾಗಿದೆ.

ದಾವ ಐಟಂ ಸಂಖ್ಯೆ 2 ನ್ನು ತಲಾ 11 ಮುಕಾಲು ಗುಂಟೇ ಯಂತೆ 4 ಜನ ಭಾಗ ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದಾರೆಂದರೆ ಸರಿ. ಹಾಗೆ 11 ಮುಕಾಲು ಗುಂಟೇ ಪ್ರತ್ಯೇಕವಾಗಿ ತನ್ನ ಹೆಸರಿನಲ್ಲಿ ಕೊಡಿ ಎಂದು ಕಂದಾಯ ಇಲಾಖೆಯವರಿಗೆ ನಮ್ಮ ತಂದೆ ಅರ್ಜಿ ಸಲ್ಲಿಸಿರುವುದಿಲ್ಲ. ಸದರಿ ಸ್ವತ್ತಿನಲ್ಲಿ ನಮಗೆ ವಿಭಾಗ ಬಗ್ಗೆ ಯಾವುದೇ ವಿವಾದ ಇಲ್ಲ. ದಾವ ಐಟಂ ಸಂಖ್ಯೆ 3 ನ್ನು ಸಹ 4 ಜನ ತಲಾ ಗುಂಟೇ ಯಂತೆ ಭಾಗ ಮಾಡಿಕೊಂಡು ಅನುಭವಿಸಿಕೊಂಡು ಬರುತ್ತಿದ್ದಾರೆ. ನಮ್ಮ ತಂದೆ ಅವರ ಹಿಸ್ಸೆಗೆ 10 ಗುಂಟೇ ಬಂದಿರುತ್ತದೆ ಎಂದು ಹಾಗೂ ಆ ಬಗ್ಗೆ ಪಹಣಿ ಪತ್ರಿಕೆಯಲ್ಲಿ ನಮೂದಿಸುವಂತೆ ಕಂದಾಯ ಅಧಿಕಾರಿಗಳ ಎದುರು

ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ಆ ಬಗ್ಗೆ ಸಹ ನಮ್ಮ ಮಧ್ಯೆ ಯಾವುದೇ ವಿವಾದ ಇಲ್ಲ. ನಮ್ಮ ತಾತ ನಾನು ಚಿಕ್ಕ ಹುಡುಗನಾಗಿದ್ದಾಗ ತೀರಿಕೊಂಡಿರುತ್ತಾರೆ ಯಾವ ವರ್ಷ ಎಂದು ಗೊತ್ತಿಲ್ಲ. ಅವರು ಮರಣ ಹೊಂದಿದ ನಂತರ ಅವರ 4 ಜನ ಗಂಡು ಮಕ್ಕಳು ದಾವ ಐಟಂ ಸಂಖ್ಯೆ 1 ರಿಂದ 3 ನ್ನು ಮೇಲೆ ಹೇಳಿದಂತೆ ವಿಭಾಗ ಮಾಡಿಕೊಂಡು ಅನುಭವಿಸಿಕೊಂಡು ಬರುತ್ತಿದ್ದಾರೆ. 4 ನೇ ಪ್ರತಿವಾದಿ ಪಿಳ್ಳಪ್ಪರವರಿಂದ 20 ಗುಂಟೇ ಜಮೀನನ್ನು ಖರೀದಿಸಿದ ನಂತರ ನಿಪಿ-19 ರಂತೆ ಅವರ ಹೆಸರಿನಲ್ಲಿ ಖಾತೆ ಪಹಣಿ ಆಗಿರುತ್ತದೆ ಎಂದರೆ ಸರಿ. ನಿಪಿ-20 ರಲ್ಲಿ ನಮ್ಮ ತಂದೆಯ ಹೆಸರಿನಲ್ಲಿ ಪ್ರತ್ಯೇಕವಾಗಿ 20 ಗುಂಟೇ ಜಮೀನು ಎಂದು ನಮೂದು ಇದೆ ಎಂದರೆ ಸರಿ. ನಿಪಿ-21 ರ ಪಹಣಿಯಲ್ಲಿ 2 ನೇ ಪ್ರತಿವಾದಿಯ ಹೆಸರಿನಲ್ಲಿ 20 ಗುಂಟೇ ಜಮೀನು ಪ್ರತ್ಯೇಕವಾಗಿದೆ ಎಂದರೆ ಸರಿ.

ದಾವ ಐಟಂ ಸಂಖ್ಯೆ 4 ರಲ್ಲಿ ನಾವೆಲ್ಲ ಒಟ್ಟು ಸ್ವಾಧೀನದಲ್ಲಿದ್ದೇವೆ ಎಂದು ತೋರಿಸಲು ದಾಖಲೆಗಳು ಇಲ್ಲ. ನಮ್ಮ ಮಧ್ಯೆ ವಿಭಾಗ ಆದ ನಂತರ 1994-95 ರಲ್ಲಿ ಸರ್ಕಾರದವರು 1 ನೇ ಪ್ರತಿವಾದಿಯ ಹೆಸರಿನಲ್ಲಿ ಅಕ್ರಮ ಸಕ್ರಮದ ಪ್ರಕಾರ ದಾವ ಐಟಂ ಸಂಖ್ಯೆ 4 ನ್ನು ಆದೇಶ ಮಾಡಿರುತ್ತಾರೆಂದರೆ ಸರಿ. ಸದರಿ ಸ್ವತ್ತು 1 ನೇ ಪ್ರತಿವಾದಿಗೆ ನಿಪಿ-3 ರ ಪ್ರಕಾರ ಬಂದಿರುತ್ತದೆ ಎಂದರೆ ಸರಿ. ಸದರಿ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ನಾವೆಲ್ಲ ಸೇರಿ ಸದರಿ ಸ್ವತ್ತನ್ನು ಉಳುಮೆ ಮಾಡುತ್ತಿದ್ದೇವೆ ಎಂದು ತೋರಿಸಲು ನಮ್ಮ ಬಳಿ ಯಾವುದೇ ದಾಖಲೆ ಇಲ್ಲ. ಈ ಹಿಂದೆ ವಿಭಾಗ ಆಗಿದ್ದರೂ ಸಹ ನಾವು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**